ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮುಳಬಾಗಿಲು

ಸಿ.ಸಿ. ಸಂಖ್ಯೆ: 62 /2016

ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 5

ಪ್ರಮಾಣೀಕರಿಸಿದ ದಿನಾಂಕ: 21.07.2026

| | |
|---|---|
| ಹೆಸರು | ವೀರಭದ್ರಪ್ಪ |
| ತಂದೆ/ಗಂಡನ ಹೆಸರು | ಭದ್ರಪ್ಪ |
| ವಯಸ್ಸು | 52 |
| ವೃತ್ತಿ | ವ್ಯವಸಾಯ |
| ವಾಸ | ಚಂತ್ರಾಗಾನಹಳ್ಳಿ |

ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-

ಚಾಸಾ 3 ಮತ್ತು 5 ರವರು ಗೊತ್ತು. ಅರೋಪಿ 1 ರವರು ಗೊತ್ತು ಅತ ಮೃತಪಟ್ಟಿರುತ್ತಾರೆ. ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಅರೋಪಿತರು ಗೊತ್ತು. 2015 ರಲ್ಲಿ ಸುಮಾರು ಬೆಳಗ್ಗೆ 10.30 ರಲ್ಲಿ ನಾನು ಮತ್ತು ಚಾಸಾ 5 ರವರು ದ್ವಿಚಕ್ರ ವಾಹನದಲ್ಲಿ ಚಲ್ಡಿಗಾನಹಳ್ಳಿಯಿಂದ ನಿಚ್ಚನಕುಂಟೆ ಕಡೆಗೆ ಹೋಗುತ್ತಿದ್ದಾಗ ಚಾಸಾ 1 ರವರ ಮೇಲೆ ಅರೋಪಿತರು ನೀಲಗಿರಿ ಮರಗಳನ್ನು ಕಟಾವು ಮಾಡಿದ ವಿಚಾರಕ್ಕೆ ಜಗಳ ಮಾಡಿದ್ದು ಅಗ ನಾನು ಮತ್ತು ಚಾಸಾ 3 ರವರು ಜಗಳ ಬಿಡಿಸಿರುತ್ತೇವೆ. ನಿಪಿ 3 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನುನಿಪಿ 3 (ಬಿ ) ಎಂದು ಗುರುತಿಸಲಾಯಿತು. ನಿಪಿ 3 ಕ್ಕೆ ಗಲಾಟೆಯಾದ ಸ್ಥಳದಲ್ಲಿ ಚಾಸಾ 1 ಮತ್ತು 5 ರವರ ಸಮಕ್ಷಮ ಮಾಡಿರುತ್ತೇನೆ. ಸದರಿ ಮಹಜರ್ ನ್ನು ಮದ್ಯಾಹ್ನ 1.00 ರಿಂದ 1.30 ವರೆಗೆ ಮಾಡಿರುತ್ತಾರೆ. ಪೋಲಿಸರು ನನ್ನ ಮುಂದೆ ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ ಓ 1 ನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲು:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-

ಅರೋಪಿ ಹಾಗೂ ಚಾಸಾ 1 ರವರ ನಡುವೆ ನೀಲಗಿರಿ ಮರಗಳನ್ನುಕಟಾವು ಮಾಡಿದ ಸಂಬಂದ ಚಾಸಾ 1 ರವರು ಹೇಳಿದ ಅಗೆ ಅರೋಪಿತರು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಯಿಂದ ಹೊಡೆಯಲು ಹೋದಾಗ ತಪ್ಪಿಸಿಕೊಂಡಿದ್ದು , ಅರೋಪಿತರು ಕೈಗಳಿಂದ ಬೆನ್ನು ಮತ್ತು ಕತ್ತಿನ ಮೇಲೆ ಚಾಸಾ 1 ರವರಿಗೆ ಹೊಡೆದಿರತುತರೆ ಎಂದರೆ ಸರಿ . ಅರೋಪಿತರು ದೊಣ್ಣೆ ತೋರಿಸಿ ಜಮೀನಿನ ವಿಚಾರಕ್ಕೆ ಬಂದರೆ ಸಾಯಿಸುವುದಾಗಿ ಚಾಸಾ 1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ . 3 ನೇ ಅರೋಪಿ ಇತರ ಅರೋಪಿಗಳಿಗೆ ಚಾಸಾ 1 ರವನ್ನು ಬಿಡಬೇಡಿ ಹೊಡೆಯಿರಿ ಎಂದು ಪ್ರಚೊದನೆ ಮಾಡಿರುತ್ತಾರೆ ಎಂದರೆ ಸರಿ .

<u>ಪಾಟೀ ಸವಾಲುಃ- ಆರೋಪಿ ಪರ ಎಂ ವಿ ಜಿ  ವಕೀಲರಿಂದಃ-</u>

ನಾನು ಚಲ್ದಿಗಾನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನಾನು ಹಾಗೂ ಚಾಸಾ 1 ರವರು ಸಂಬಂಧಿಕರು ಎಂದರೆ ಸರಿಯಲ್ಲ. ಚಲ್ದಗಾನಹಳ್ಳಿಯಿಂದ ಗ್ರಾಮದಿಂದ ಗುಜ್ಜನಹಳ್ಳಿ ಗ್ರಾಮಕ್ಕೆ 20 ಕಿ ಮೀ ಅಗುತ್ತದ ಎಂದರೆ ಸರಿ . ಚಾಸಾ 1 ರವರು ನಿಮಗೆ ಪರಿಚಯ ಎಂದರೆ ಸರಿ .  ಅರೋಪಿತರನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅರೋಪಿತರು ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ. ಗಲಾಟೆಯು ಯಾವ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ ಎಂದರೆ ಸರಿ .  ಗಲಾಟೆಯಾದ ಸ್ಥಳದ ಸರ್ವೆ ನಂಬರ್ ಗೊತ್ತಿದೆಯಾ ಎಂದರೆ ಗುಜ್ಜನಹಳ್ಳಿ ಗ್ರಾಮದ ಸರ್ವೆ ನಂ 34.  ನಾನು ವ್ಯವಸಾಯ ಮಾಡುತ್ತೇನೆ. ನೀವು ಗುಜ್ಜನಹಳ್ಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.  ಗಲಾಟೆ ಅಗುವ ಸಮಯದಲ್ಲಿ 5 ಜನ ಇದ್ದರು ಅವರ ಹೆಸರು ಚಾಸಾ 1 ಮತ್ತು 3 ಹಾಗೂ ಅರೋಪಿತರು ಇದ್ದರು.  ಗಲಾಟೆ ನಡೆಯುವ ಸಮಯದಲ್ಲಿ ನಾನು ಮತ್ತು ಚಾಸಾ 3 ರವರು ಇದ್ದೇವು. ನೀವು ಹೋದಾಗ ಮರಗಳನ್ನು ಕಟಾವು ಮಾಡುತ್ತಿರಲಿಲ್ಲ ಎಂದರೆ ಕಟಾವು ಮಾಡಿದ್ದರು.   ಚಾಸಾ 1 ರವರು ನಿಮ್ಮ ಜೂತೆ ಬಂದಿರುತ್ತಾರಾ ಎಂದರೆ ಮೊದಲೇ ಹೋಗಿದ್ದರು.   ಚಾಸಾ 1 ಮತ್ತು ನೀವು ಹಾಗೂ ಚಾಸಾ 3 ರವರು ಮಾತನಾಡಿಕೊಂಡು ಒಟ್ಟಿಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ.  ಚಾಸಾ 1 ರವರ ಪರವಾಗಿ ಸಾಕ್ಷಿ ಹಾಕಲು ಹೋಗಿದ್ದೇನು ಎಂದರೆ ಸರಿ .  ನಿಪಿ 3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರ ಸರಿಯಲ್ಲ. ಗಲಾಟೆಯಾದ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ.  ಚಾಸಾ 1 ರವರಿಗೆ ಸಹಾಯ ಮಾಡಲು ಹೋಗಿದ್ದು ಯಾವುದೇ ಗಲಾಟೆ ಅಗಿಲ್ಲ ಎಂದರೆ ಸರಿಯಲ್ಲ.  ನಿಪಿ 3 ನ್ನು 10.00 ರಿಂದ 1.00 ವರೆಗೆ ಮಾಡಿರುತ್ತಾರೆ.  ನಿಪಿ 3 ನ್ನು ಮಾಡುವ ಕಾಲಕ್ಕೆ 5 ಜನ ಇದ್ದೇವು.  ಚಾಸಾ 1 ರವರ ಅಣ್ಣತಮ್ಮಂದಿರ ನಡುವೆ ಸಿವಿಲ್ ದಾವೆ ಇದ್ದು ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆಅಗಿಲ್ಲದಿದ್ದರೂ ಸಹ ಚಾಸಾ 1 ರವರ ಪರವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-  ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

(ಹರೀಶ್ ಜಿ )

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಜೆಎಂಎಫ್ ಸಿ, ಮುಳಬಾಗಿಲು